2017 ಕ.ತೀ.ವ 146

(ಧಾರವಾಡ ನ್ಯಾಯಪೀಠ)

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಶ್ರೀ ಸಂಜಯ್ ಚಂದೂಸ ಗೊಂಗಳೆ –ವಿರುದ್ಧ–
ಶ್ರೀಮತಿ ಅಂಜಲಿ ಅಲಿಯಾಸ್ ವಿದ್ಯಾ ಮತ್ತು ಇನ್ನೊಬ್ಬರು*

1984ರ ಕೌಟುಂಬಿಕ ನ್ಯಾಯಾಲಯಗಳ ಕಾಯಿದೆ ಕಲಂ 19(4)ರಡಿಯಲ್ಲಿ ಪರಿಷ್ಕರಣಾ ಅರ್ಜಿ.

ಎದುರುದಾರರಿಗೆ ಜೀವನಾಂಶವನ್ನು ನೀಡುವಂತೆ ನೀಡಿದ ಕೌಟುಂಬಿಕ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಪರಿಷ್ಕರಣಾ ಅರ್ಜಿ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ಹಾಜರುಪಡಿಸಲ್ಪಟ್ಟ ಸಾಕ್ಷ್ಯಾಧಾರಗಳಿಂದ ಮತ್ತು ಅಧಿವಿಚಾರಣಾ ನ್ಯಾಯಾಲಯದ ಆದೇಶದಿಂದ ಅರ್ಜಿದಾರರು ಎದುರುದಾರರನ್ನು 3 ವರ್ಷಗಳಿಗೂ ಮೇಲ್ಪಟ್ಟು ತ್ಯಜಿಸಿರುವುದು ಮತ್ತು ಉದ್ದೇಶ ಪೂರ್ವಕವಾಗಿ ಕಡೆಗಣಿಸಿರುವ ಅಂಶ ಸ್ಪಷ್ಟವಾಗಿರುವ ಕಾರಣ ಅಧಿವಿಚಾರಣಾ ನ್ಯಾಯಾಲಯವು ಮಾಸಿಕ ಜೀವನಾಂಶವನ್ನು ನೀಡಬೇಕೆಂದು ಅರ್ಜಿದಾರರಿಗೆ ನೀಡಿದ ಆದೇಶಕ್ರಮ ಸರಿಯೆಂದು ಎತ್ತಿ ಹಿಡಿದ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ವಜಾಗೊಳಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆ* | *ಪ್ಯಾರಾದಲ್ಲಿ* |
|---|---|
| *1. ಎಐಆರ್ 2014 ಎಸ್‌ಸಿ 2875*<br>*ಭುವನ್ ಮೋಹನ್ ಸಿಂಗ್ –ವಿರುದ್ಧ– ಮೀನ* | *(ಉಲ್ಲೇ) 13* |

*ಆರ್.ಪಿ.ಎಫ್.ಸಿ. ಸಂಖ್ಯೆ: 100143/2014, ದಿನಾಂಕ: 17ನೇ ಜೂನ್, 2015.

ಅರ್ಜಿದಾರರ ಪರ: ಶ್ರೀ ಗಿರೀಶ್ ಎ. ಯದ್ವಾಡ್, ವಕೀಲರು;
ಎದುರುದಾರರ ಪರ: ಶ್ರೀಮತಿ ಗಿರಿಜ ಎಸ್. ಹಿರೇಮಠ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:**

ಅರ್ಜಿದಾರ/ಪತಿಯು, 1ನೇ ಎದುರುದಾರ/ಪತ್ನಿಗೆ 2,500/–ರೂ.ಗಳ ಮತ್ತು ಅಂದು ಇದ್ದಂತೆ ಸುಮಾರು 5 1/2 ವರ್ಷ ವಯಸ್ಸಿನ 2ನೇ ಎದುರುದಾರ/ಮಗಳಿಗೆ 1000/–ರೂ.ಗಳ ಜೀವನಾಂಶವನ್ನು ನೀಡಬೇಕೆಂದು ಬೆಳಗಾವಿಯ ಕೌಟುಂಬಿಕ ನ್ಯಾಯಾಲಯದ ಕಡತದಲ್ಲಿನ ಕ್ರಿಮಿನಲ್ ಸಂಕೀರ್ಣ ಅರ್ಜಿ ಸಂ. 223/2013ರಲ್ಲಿ ನೀಡಿದ ದಿನಾಂಕ 10.6.2004ರ ಆದೇಶದ ವಿರುದ್ಧ ಮೇಲಿನ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದ್ದಾರೆ.

2. 1ನೇ ಎದುರುದಾರಳು ಅರ್ಜಿದಾರನು ಕಾನೂನುಬದ್ಧವಾಗಿ ವಿವಾಹವಾದ ಪತ್ನಿಯಾಗಿದ್ದಾಳೆ, ಅವರ ವಿವಾಹದ ಪರಿಣಾಮವಾಗಿ 2ನೇ ಎದುರುದಾರ/ಮಗಳು ಜನಿಸಿದಳೆಂಬುದು ಎದುರುದಾರರ ಪ್ರಕರಣವಾಗಿದೆ. ಮಗು ಹುಟ್ಟಿದ ಕೆಲವು ತಿಂಗಳುಗಳ ನಂತರ ಅರ್ಜಿದಾರರು ಮತ್ತು ಅವರ ಕುಟುಂಬದ ಸದಸ್ಯರು 1ನೇ ಎದುರುದಾರಳಿಗೆ ಕಿರುಕುಳ ನೀಡಲು ಪ್ರಾರಂಭಿಸಿದ್ದಾರೆ ಮತ್ತು ಹೊಲಸು ಮಾತುಗಳಿಂದ ಬೈಯುತ್ತಿದ್ದರೆಂದು, ಅರ್ಜಿದಾರರು ಆಗಾಗ ಕುಡಿದು ಬರುತ್ತಿದ್ದರೆಂದು ಮತ್ತು ತನ್ನನ್ನು / ಹೆಂಡತಿಯನ್ನು ಹೊಡೆಯುತ್ತಿದ್ದರೆಂದು ಮತ್ತು 15 ದಿನಗಳ ಅವಧಿಗೊಮ್ಮೆ ಮಾತ್ರ ದಿನಸಿಯನ್ನು ತರುತ್ತಿದ್ದನೆಂದು ಎದುರುದಾರರು ಕೌಟುಂಬಿಕ ನ್ಯಾಯಾಲಯದ ಮುಂದೆ ಸಲ್ಲಿಸಿರುವ ಅರ್ಜಿಯಲ್ಲಿ ಆರೋಪಿಸಲಾಗಿದೆ. ಎಷ್ಟೇ ಕೇಳಿಕೊಂಡರೂ ಕೂಡ ತಿಂಗಳಲ್ಲಿ ಇನ್ನುಳಿದ 15 ದಿನಗಳಿಗೆ ಆಹಾರಧಾನ್ಯಗಳನ್ನು ತರಲು ನಿರಾಕರಿಸುತ್ತಿದ್ದನು. ಭವಿಷ್ಯದಲ್ಲಿ ಅವನ ದಾರಿಯನ್ನು ಸುಧಾರಿಸಿಕೊಳ್ಳುವನೆಂಬ ಭರವಸೆಯಿಂದ ಅರ್ಜಿದಾರನ ಕೃತ್ಯಗಳನ್ನು ತಾನು ಸಹಿಸಿಕೊಂಡಿದ್ದೆ. ತನ್ನ ಮಗಳು ಮೂತ್ರಪಿಂಡ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಸುಮಾರು 60,000/– ರೂ.ಗಳ

ವೆಚ್ಚವನ್ನು ತನ್ನ ತಂದೆ ಭರಿಸಿದರೆಂದು ಮತ್ತು ಶಸ್ತ್ರಚಿಕಿತ್ಸೆಗೆ ಅರ್ಜಿದಾರನು 20,000/- ರೂ.ಗಳನ್ನು ಖರ್ಚು ಮಾಡಿರುವನೆಂಬುದು 1ನೇ ಎದುರುದಾರ/ ಹೆಂಡತಿಯ ವಾದವಾಗಿದೆ. ಅರ್ಜಿದಾರನು ರಬ್ಬರ್ ಸ್ಟ್ಯಾಂಪ್ ವ್ಯವಹಾರವನ್ನು ನಡೆಸುತ್ತಿದ್ದು ಎರಡೂವರೆ ವರ್ಷಗಳಿಂದ ಜೀವನಾಂಶವನ್ನು ನೀಡಿರುವುದಿಲ್ಲ. ಆದುದರಿಂದ ಕೌಟುಂಬಿಕ ನ್ಯಾಯಾಲಯದ ಮುಂದೆ ಅರ್ಜಿಯನ್ನು ಸಲ್ಲಿಸಲು ಮುಂದಾಗಿದ್ದಾರೆ.

3. ಅರ್ಜಿದಾರ/ಪತಿಯು ತನ್ನ ವಿರುದ್ಧ ಮಾಡಲಾದ ಎಲ್ಲಾ ಆಪಾದನೆಗಳನ್ನು ನಿರಾಕರಿಸಿ ತನ್ನ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ಆದರೆ ಎದುರುದಾರರೊಂದಿಗಿನ ಸಂಬಂಧವನ್ನು ಒಪ್ಪಿಕೊಂಡಿದ್ದಾರೆ. ಅವರು 1ನೇ ಎದುರುದಾರ/ಪತ್ನಿಯು, ತನ್ನ ವಿವಾಹವಾದ ದಿನದಿಂದಲೂ ತನ್ನ ಕಂಪನಿಯಲ್ಲಿ ಆಸಕ್ತಿ ಹೊಂದಿರಲಿಲ್ಲವೆಂಬುವನ್ನು ಮತ್ತೆ ತಿಳಿಸಿದ್ದಾರೆ. ಅವಳು ತನ್ನ ಇಷ್ಟಕ್ಕೆ ವಿರುದ್ಧವಾಗಿ ತನ್ನ ತವರು ಮನೆಗೆ ಆಗಾಗ ಹೋಗುತ್ತಿದ್ದಳು. ಗಂಭೀರ ವೈದ್ಯಕೀಯ ಸಮಸ್ಯೆ ಸ್ಥಿತಿಯಲ್ಲಿ ಬಳಲುತ್ತಿದ್ದು ಇದಕ್ಕಾಗಿ ತಾನು ತನ್ನ ತಾಯಿಯ ಚಿನ್ನಾಭರಣಗಳನ್ನು ಮಾರಾಟ ಮಾಡಿ ಎಲ್ಲಾ ವೈದ್ಯಕೀಯ ವೆಚ್ಚಗಳನ್ನು ಭರಿಸಿದ್ದೆ. ತಾನು ಎದುರುದಾರ/ಪತ್ನಿಯೊಂದಿಗೆ ವೈವಾಹಿಕ ಜೀವನ ನಡೆಸಲು ಸಿದ್ಧ ಮತ್ತು ಇಚ್ಛೆಯಿರುತ್ತದೆ. ತನ್ನ ಕಸುಬಿನಿಂದ ಅತ್ಯಲ್ಪ ಆದಾಯ ಪಡೆಯುತ್ತಿದ್ದರೂ ತಾನು ತನ್ನ ವಯಸ್ಸಾದ ತಾಯಿಯ ವೈದ್ಯಕೀಯ ವೆಚ್ಚವನ್ನು ನೀಡಬೇಕು ಆದ್ದರಿಂದ ಎದುರುದಾರರಿಗೆ ಪ್ರತ್ಯೇಕ ಜೀವನಾಂಶ ಇತ್ಯಾದಿಗಳನ್ನು ನೀಡಲು ಸಾಧ್ಯವಿರುವುದಿಲ್ಲ ಎಂದು ನಿವೇದಿಸಿರುತ್ತಾರೆ.

4. ತನ್ನ ವಾದವನ್ನು ರುಜುವಾತುಪಡಿಸುವ ಸಲುವಾಗಿ 1ನೇ ಎದುರುದಾರ/ ಹೆಂಡತಿಯು ಪ್ರಾ.ಸಾ.1 ಎಂದು ತನ್ನನ್ನೇ ವಿಚಾರಣೆ ಮಾಡಿಕೊಂಡಿದ್ದಾರೆ ಮತ್ತು ನಿಶಾನೆ ಪಿ.1 ಮತ್ತು ಪಿ.2ರ ದಸ್ತಾವೇಜುಗಳನ್ನು ಗುರುತು ಮಾಡಲಾಗಿದೆ. ಅರ್ಜಿದಾರ/ಪತಿಯನ್ನು ಪ್ರತ್ಯರ್ಜಿದಾರ ಸಂ.1 ಎಂದು ಅವನನ್ನು ವಿಚಾರಣೆ ಮಾಡಲಾಗಿದ್ದು, ನಿಶಾನೆ ಆರ್.1 ಮತ್ತು 2 ದಸ್ತಾವೇಜುಗಳನ್ನು ಗುರುತು ಮಾಡಲಾಗಿದೆ.

5. ದಾಖಲೆಯಲ್ಲಿರುವ ಸಂಪೂರ್ಣ ಮಾಹಿತಿಯನ್ನು ಪರಿಗಣಿಸಿದ ನಂತರ, ಕೌಟುಂಬಿಕ ನ್ಯಾಯಾಲಯವು ದಿನಾಂಕ 10.6.2014ರ ತನ್ನ ಪ್ರಶ್ನಿತ ಆದೇಶದ ಮೂಲಕ ಈ ಆದೇಶದ ದಿನಾಂಕದಿಂದ 1ನೇ ಎದುರುದಾರ/ಪತ್ನಿಗೆ 2,500/- ರೂ.ಗಳ ಮಾಸಿಕ ಜೀವನಾಂಶವನ್ನು 2ನೇ ಎದುರುದಾರ/ಮಗಳಿಗೆ 1,000/- ರೂ.ಗಳ ಮಾಸಿಕ ಜೀವನಾಂಶವನ್ನು ಮಂಜೂರು ಮಾಡಿದ್ದು, ಇದರ ವಿರುದ್ಧವಾಗಿ ಪ್ರಸ್ತುತ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಲಾಗಿದೆ.

6. ದಾವೆಯ ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವನ್ನು ಆಲಿಸಲಾಗಿದೆ.

7. ದಂಡ ಪ್ರಕ್ರಿಯಾ ಸಂಹಿತೆಯ 125(4)ನೇ ಪ್ರಕರಣದ ಉಪಬಂಧಗಳ ದೃಷ್ಟಿಯಲ್ಲಿ ಅವಳು ತನ್ನ ಪತಿ/ಅರ್ಜಿದಾರನನ್ನು ತ್ಯಜಿಸಿರುವುದರಿಂದ 1ನೇ ಎದುರುದಾರಳು/ಪತ್ನಿ ಯಾವುದೇ ಜೀವನಾಂಶಕ್ಕೆ ಹಕ್ಕು ಇಲ್ಲದವಳಾಗಿರುವುದರಿಂದ ಕೌಟುಂಬಿಕ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವು ದಾಖಲೆಯಲ್ಲಿರುವ ಮಾಹಿತಿಗೆ ವಿರುದ್ಧವಾಗಿದೆಯೆಂದು ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಗಿರೀಶ್ ಎ. ಯದ್ವಾಡ್‌ರವರು ವಾದಿಸಿದ್ದಾರೆ. ಅವರು ಆಕ್ಷೇಪಣೆಗಳ ವಿವರಣೆಯಲ್ಲಿ ತೆಗೆದುಕೊಂಡ ಪ್ರತಿವಾದ ಮತ್ತು ನ್ಯಾಯಾಲಯದ ಮುಂದಿದ್ದ ಸಾಕ್ಷ್ಯದ ಬಗ್ಗೆ ಈ ನ್ಯಾಯಾಲಯದ ಬಗ್ಗೆ ಗಮನ ಸೆಳೆದಿದ್ದಾರೆ. ಅರ್ಜಿದಾರನು ಕೌಟುಂಬಿಕ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ನಿಶಾನೆ ಆರ್.2 ವೈದ್ಯಕೀಯ ಬಿಲ್‌ಗಳು, ಅವನು ಸಂಪೂರ್ಣವಾಗಿ ವೈದ್ಯಕೀಯ ಬಿಲ್ ಗಳನ್ನು ಸಂದಾಯ ಮಾಡಿದ್ದನೆಂಬುದನ್ನು ಸ್ಪಷ್ಟವಾಗಿ ವಿವರಿಸುತ್ತವೆಯೆಂದು ಸಹ ಅವರು ವಾದಿಸಿದ್ದಾರೆ. 1ನೇ ಆಪಾದಿತಳು, ತನಗೆ ಬಾಗಲಕೋಟೆಯಲ್ಲಿ ವಾತಾವರಣ ಹಿಡಿಸಲಿಲ್ಲವೆಂದು ಅರ್ಜಿದಾರನ ಸಹವಾಸವನ್ನು ತಾನೇ ಬಿಟ್ಟು, ಬೆಳಗಾವಿಯಂಥ ನಗರದಲ್ಲಿ ಅವಳು ವಾಸಿಸುತ್ತಿದ್ದಳೆಂದು, ಆದುದರಿಂದ 1ನೇ ಎದುರುದಾರಳಿಗೆ/ಹೆಂಡತಿಗೆ 2,500/- ರೂ.ಗಳ ಜೀವನಾಂಶ ಮಂಜೂರು ಮಾಡಬೇಕೆನ್ನುವ ದಾಖಲೆಯಲ್ಲಿರುವ ಸಾಕ್ಷ್ಯ ಮತ್ತು ಸಂಗತಿಯನ್ನು ಪರಿಗಣಿಸಿಲ್ಲದಿರುವುದು ದಂಡ ಪ್ರಕ್ರಿಯಾ ಸಂಹಿತೆಯ

125(4)ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿದೆಯೆಂದು ಸಹ ಮಾನ್ಯ ವಕೀಲರು ವಾದಿಸಿದ್ದಾರೆ. ಆದ್ದರಿಂದ ಅರ್ಜಿಯನ್ನು ಅಂಗೀಕರಿಸಬೇಕೆಂದು ವಿನಂತಿಸಿಕೊಂಡಿದ್ದಾರೆ.

8. ಮತ್ತೊಂದು ಕಡೆ, ಎದುರುದಾರರ ಪರವಾಗಿ ಹಾಜರಾಗಿರುವ ಶ್ರೀಮತಿ ಗಿರಿಜಾ ಎಸ್. ಹಿರೇಮಠ್‌ರವರು, ಅರ್ಜಿದಾರ/ಪತಿಯು 1ನೇ ಎದುರುದಾರ/ಪತ್ನಿಯೊಂದಿಗೆ ಸದಾ ಜಗಳ ಮಾಡಿಕೊಂಡು ಅವಳನ್ನು ಥಳಿಸುತ್ತಿದ್ದನೆಂದು ವಾದಿಸುತ್ತಾ ನಿರ್ದಿಷ್ಟವಾಗಿ ಪ್ರಶ್ನಿತ ಆದೇಶವನ್ನು ಸಮರ್ಥಿಸಿಕೊಳ್ಳಲು ಕೋರಿಕೊಂಡಿದ್ದಾರೆ. ಅರ್ಜಿದಾರನೇ ಮೂರು ವರ್ಷಗಳಿಂದ ಎದುರುದಾರಳನ್ನು ತ್ಯಜಿಸಿದ್ದನೆಂದು ಇದರಿಂದ ಅವಳು ತನ್ನ ಮಗುವಿನೊಂದಿಗೆ ತನ್ನ ತವರುಮನೆಗೆ ಹೋಗುವಂತಾಗಿತ್ತು. ಅಲ್ಲದೆ, ಅವರು, ಕೌಟುಂಬಿಕ ನ್ಯಾಯಾಲಯವು ಮಂಜೂರು ಮಾಡಿದ ಜೀವನಾಂಶವು ಕಾನೂನಿಗನುಸಾರವಾಗಿದೆಯೆಂದು ಆದುದರಿಂದ ಈ ನ್ಯಾಯಾಲಯ ಹಸ್ತಕ್ಷೇಪ ಮಾಡಲಾಗುವುದಿಲ್ಲವೆಂದು ವಾದಿಸಿದ್ದಾರೆ. ಆದ್ದರಿಂದ ಅವರು ಅರ್ಜಿಯನ್ನು ವಜಾಗೊಳಿಸಬೇಕೆಂದು ನ್ಯಾಯಾಲಯವನ್ನು ವಿನಂತಿಸಿದ್ದಾರೆ.

9. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ವಕೀಲರು ಈ ದಾವೆಯಲ್ಲಿ ಮಂಡಿಸಿದ ವಾದಗಳಿಗೆ ನಾನು ನನ್ನ ಆಲೋಚನಾಪರ ಪರಿಗಣನೆಯನ್ನು ನೀಡಿರುತ್ತೇನೆ.

10. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, 1ನೇ ಎದುರುದಾರ/ಹೆಂಡತಿಯು ತಾನೇ ಅರ್ಜಿದಾರ/ಪತಿಯನ್ನು ಪರಿತ್ಯಜಿಸಿದಳೆಂದು ವಾದಿಸಿರುವಷ್ಟರಮಟ್ಟಿಗೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 125(4)ನೇ ಪ್ರಕರಣದ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಮೇರೆಗೆ ಕೌಟುಂಬಿಕ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದಾಳೆಂಬ 1ನೇ ಎದುರುದಾರ/ಪತ್ನಿಯು ಈ ಮುಂದೆ ತಿಳಿಸಿದ ಸ್ಪಷ್ಟ ನಿಬಂಧನೆಗಳಲ್ಲಿವೆ ಎಂಬ ಸರಳ ಕಾರಣಕ್ಕಾಗಿ ಅವಳು ಯಾವುದೇ ಜೀವನಾಂಶಕ್ಕೆ ಹಕ್ಕುಳ್ಳವಳಾಗುವುದಿಲ್ಲವೆಂಬುದನ್ನು ಒಪ್ಪಿಕೊಳ್ಳಲಾಗುವುದಿಲ್ಲ 1ನೇ ಪ್ರತ್ಯರ್ಜಿದಾರ/ಪತಿಯು ಈ ಮುಂದಿನಂತೆ ಸವಿವರವಾದ ಹೇಳಿಕೆಯನ್ನು ನೀಡಿದ್ದಾಳೆ:

"ಲಗ್ನವಾದ ಕೆಲ ದಿನಗಳಲ್ಲಿ ಗಂಡನ ತುಂಬಾ ಶೆರೆ ಕುಡಿದು ಬಂದು ಅರ್ಜಿದಾರ ನಂ.1 ಇವಳಿಗೆ ಮಾನ್ಯ ನ್ಯಾಯಾಲಯದ ಮುಂದೆ ಹೇಳಲಾರದಂಥಾ ಹೊಲಸು ಬೈಗಳುಗಳನ್ನು ಬೈಯುತ್ತಿದ್ದನು ಮತ್ತು ಶೆರೆ ಕುಡಿದಾಗ ಬಡಿಯುತ್ತಿದ್ದನು. ಹಾಗೂ ತಿಂಗಳಿಗೆ 15 ದಿನಗಳಿಗೆ ಮಾತ್ರ ಸಾಕಾಗುವಷ್ಟು ಕಿರಾಣಿ ಸಾಮಾನುಗಳನ್ನು ತರುತ್ತಿದ್ದನು. ನಂತರ ಎಷ್ಟೇ ವಿನಂತಿಸಿಕೊಂಡರು ಜೀವನಾಂಶದ ವಸ್ತುಗಳನ್ನು ತರುತ್ತಿರಲಿಲ್ಲ. ಇಂದಿಲ್ಲಾ ನಾಳೆ ಸುಧಾರಿಸಬಹುದು ಒಂದು ಹೊತ್ತು ಊಟ ಮಾಡಿ ಗಂಡನ ಮನೆಯಲ್ಲಿ ಒಂದು ವರ್ಷದಲ್ಲಿ ಎರಡು ತಿಂಗಳು ಗಂಡನು ಇಟ್ಟುಕೊಳ್ಳುತ್ತಿದ್ದ. ನಂತರ 8-10 ತಿಂಗಳು ತವರು ಮನೆ ಬೆಳಗಾವಿಯಲ್ಲಿ ಅರ್ಜಿದಾರ ನಂ.1 ಇವಳನ್ನು ಬಿಟ್ಟು ಹೋಗುತ್ತಿದ್ದ. ಈ ಮಧ್ಯೆದಲ್ಲಿ ಅರ್ಜಿದಾರ ನಂ.1 ಇವಳು ಗರ್ಭಿಣಿಯಾದಳು. ನಂತರ ಮಗು ಹುಟ್ಟಿದ ಮೇಲೆ ವೈಷ್ಣವಿ ಅರ್ಜಿದಾರ ನಂ.2 ಇವಳಿಗೆ ಹೊಟ್ಟೆಯಲ್ಲಿ ಹುಣ್ಣಿನ ಗಡ್ಡೆಯಿದ್ದು, ಕೆ.ಎಲ್.ಇ ಆಸ್ಪತ್ರೆ ಬೆಳಗಾವಿ ಇಲ್ಲಿ ದೊಡ್ಡ ಸಿರಿಯಸ್ ಆಪರೇಷನ್ ಆಗಿ ವೈಷ್ಣವಿ ಮತ್ತು ಒಂದು ಕಿಡ್ನಿಯನ್ನು ಮತ್ತು ಹೊಟ್ಟೆ ಹುಣ್ಣಿನ ಗಡ್ಡೆಯನ್ನು ಆಪರೇಷನ ಮಾಡಿ ತೆಗೆದಿದ್ದರಿಂದ ಅರ್ಜಿದಾರಳ ತಂದೆಯು 60,000/- ರೂ.ಗಳನ್ನು ಹಾಗೂ ಎದುರುದಾರನು 20,000/- ಆಪರೇಷನ್ ಖರ್ಚು ಮಾಡಿರುತ್ತಾರೆ."

"ಮತ್ತೆ ಕೆಲವೇ ದಿನಗಳಲ್ಲಿ ತನ್ನ ಕುಡಿತದ ಚಟಕ್ಕೆ ಬಿದ್ದು, ಬೈದು ಹೊಡೆ ಬಡೆ ಮಾಡಿ ಹೊಟ್ಟೆಗೆ ಜೀವನಾಂಶ ಕೊಡಲಾರದೆ ಈಗ 2 1/2 ವರ್ಷದ ಹಿಂದೆ ಅರ್ಜಿದಾರ ನಂ.1 ಮತ್ತು 2 ಇವರನ್ನು ಬೆಳಗಾವಿ ತವರು ಮನೆಯಲ್ಲಿ ಬಿಟ್ಟಿದ್ದು ಈ 2 1/2 ವರ್ಷದಲ್ಲಿ ಅರ್ಜಿದಾರ ನಂ.1 ಜೀವನಾಂಶವನ್ನು ಹಾಗೂ ಅರ್ಜಿದಾರಳ ನಂ.2ರ ಶಾಲೆಯ ಖರ್ಚನ್ನು ಮತ್ತು ಜೀವನಾಂಶವನ್ನು ಎಷ್ಟೇ ವಿನಂತಿಸಿಕೊಂಡರೂ ಒಂದು ರೂಪಾಯಿ ಸಹ ಕೊಟ್ಟಿಲ್ಲ. ಮತ್ತು ಬಾಗಲಕೋಟೆ ಮತ್ತು ಬೆಳಗಾವಿಯ ಎರಡು ಕಡೆಯ ಗುರುಹಿರಿಯರಾದ 1) ಅರುಣ ಕೋಸಂಬರಿ 2) ಮದನ ಕಲಬುರ್ಗಿ ಹಾಗೂ ಗಂಡನ ಕಡೆಯಿಂದ

**1) ಸ್ಮೀರಾ ಪವಾರ 2) ಶಾರದ ಕಲಬುರ್ಗಿ ಏಪ್ರಿಲ್ 2013ಕ್ಕೆ ರಾಜಿ ಮಾತುಕತೆ ಆಗಿದ್ದರು ಜೀವನಾಂಶ ಕೊಡಲು ತಿರಸ್ಕಾರ ಮಾಡಿದ್ದರಿಂದ ಈ ಪ್ರಕರಣ ದಾಖಲು ಮಾಡುವ ಕಾರಣ ಪ್ರಸಂಗ ಉಂಟಾಗಿದೆ ಮತ್ತು ಅರ್ಜಿದಾರಳಿಗೆ ಯಾವುದೇ ಮೂಲದಿಂದ ಸ್ವಂತ ಆದಾಯವಿಲ್ಲ ಹಾಗೂ ಎದುರುದಾರನು ಸ್ವಂತ ಸ್ಕೂಲ್ ರಬ್ಬರ್ ಸ್ಟ್ಯಾಂಪ್ ಉದ್ಯೋಗದಿಂದ ಬಾಗಲಕೋಟೆಯಲ್ಲಿ ಪ್ರತಿ ತಿಂಗಳಿಗೆ ಖರ್ಚು ತೆಗೆದು ಹೆಚ್ಚು ಕಡಿಮೆ ಪ್ರತಿ ತಿಂಗಳಿಗೆ ರೂ.20,000/- ಆದಾಯ ಗಳಿಸುತ್ತಾನೆ.''**

11. ಪತ್ನಿಯು ತಾನು ಪ್ರಾ.ಸಾ. 1 ಎಂದು ವಿಚಾರಣೆಗೊಳಗಾಗಿದ್ದು ಪ್ರಮಾಣ ಮಾಡಿ ಅವಳು ತಾನು ಒಂದು ತಿಂಗಳ ಅವಧಿಯಲ್ಲಿ ಮಾತ್ರ ತನ್ನ ಗಂಡನೊಂದಿಗೆ ಗಂಡನ ಮನೆಯಲ್ಲಿ ಇದ್ದಳೆಂದು ನಂತರ 2 ತಿಂಗಳುಗಳ ಕಾಲ ಬೆಳಗಾವಿಯಲ್ಲಿ ತನ್ನ ಪೋಷಕರೊಂದಿಗೆ ಇದ್ದಳೆಂದು ನಂತರ ತನ್ನ ಗಂಡನ ಮನೆಗೆ ಹಿಂದಿರುಗಿದಳೆಂದು ತಿಳಿಸಿದ್ದಾಳೆ. ಮತ್ತೆ ತನ್ನ ಗಂಡನೊಂದಿಗೆ 4 ತಿಂಗಳುಗಳು ಉಳಿದುಕೊಂಡಿದ್ದ ನಂತರ ಅವಳು ತವರು ಮನೆಗೆ ಬಂದಿದ್ದಾಳೆ. ಅವಳು ತಾನೇ ಗಂಡನ ಮನೆಯಿಂದ ಹೊರಗೆ ಉಳಿದಿದ್ದ ಸಂಗತಿಯನ್ನು ನಿರಾಕರಿಸಿದ್ದಾಳೆ. ಒಂದು ವರ್ಷದಲ್ಲಿ ಸುಮಾರು 8 ರಿಂದ 10 ತಿಂಗಳು ತನ್ನ ತವರು ಮನೆಯಲ್ಲಿದ್ದ ಸಂಗತಿಯನ್ನು ಸಹ ನಿರಾಕರಿಸಿದ್ದಾಳೆ ಮತ್ತು ತನ್ನ ಮಗಳ ವೈದ್ಯಕೀಯ ವೆಚ್ಚಕ್ಕೆ 1 ಲಕ್ಷ ರೂ.ಮೊತ್ತವನ್ನು ತನ್ನ ಪತಿ ಸಂದಾಯ ಮಾಡಿದ್ದನೆಂಬುದನ್ನು ಸಹ ನಿರಾಕರಿಸಿದ್ದಾಳೆ. ಅವಳು ನಿಶಾನೆ ಪಿ.1 ರಿಂದ 5 ರ ವರೆಗಿನ ಬಿಲ್ಲುಗಳನ್ನು ಸಲ್ಲಿಸುವ ಮೂಲಕ ತನ್ನ ಮಗಳಿಗೆ ತಗುಲಿದ ವೈದ್ಯಕೀಯ ವೆಚ್ಚವನ್ನು ಭರಿಸಿದೆನೆಂದು ಸಹ ತಿಳಿಸಿದ್ದಾಳೆ ಮತ್ತು ತನ್ನಿಂದ ಕೆಲವು ಬಿಲ್‌ಗಳನ್ನು ಪತಿಯು ಪಡೆದುಕೊಂಡನೆಂದೂ ಸಹ ತಿಳಿಸಿದ್ದಾಳೆ. ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಪರಿಗಣಿಸಿದ ನಂತರ ಕೌಟುಂಬಿಕ ನ್ಯಾಯಾಲಯ ಪ್ರತ್ಯರ್ಜಿದಾರ ಸಾಕ್ಷ್ಯ 1ರ ಸಾಕ್ಷ್ಯವು, ಮನೆಯಲ್ಲಿ ಅವಳು ಯಾವಾಗಲೂ ಕೋಪದಿಂದಿರುವಳೆಂಬ ಕಾರಣಕ್ಕಾಗಿ ತನ್ನ ತಾಯಿಯು 1ನೇ ಎದುರುದಾರ/ಪತ್ನಿಯೊಂದಿಗೆ ಯಾವಾಗಲೂ ಜಗಳವಾಡುತ್ತಿದ್ದಳು, ಅವನು ಬಡವನಾಗಿರುವ ಕಾರಣಕ್ಕೆ ಅವಳು ಯಾವಾಗಲೂ

ಬೈಯುತ್ತಿದ್ದಳು ಆದರೆ ಸದರಿ ವಾದವನ್ನು ಅರ್ಜಿದಾರನು ಗಣನೆಗೆ ತೆಗೆದುಕೊಂಡಿರಲಿಲ್ಲ ಎಂಬುದನ್ನು ಪ್ರಕಟಪಡಿಸುತ್ತದೆಯೆಂಬ ನಿರ್ಣಯವನ್ನು ಕೌಟುಂಬಿಕ ನ್ಯಾಯಾಲಯವು ದಾಖಲಿಸಿದೆ; ಪತಿ ಮತ್ತು ಪತ್ನಿಯರ ನಡುವಿನ ವಿವಾದವನ್ನು ಬಗೆಹರಿಸಲು 1ನೇ ಎದುರುದಾರರ ಮನೆಯಲ್ಲಿ ಪಂಚಾಯತಿಯನ್ನು ನಡೆಸಲಾಗಿತ್ತು. ಆದರೆ 1ನೇ ಎದುರುದಾರರ ಮನೆಯಲ್ಲಿ ಒಂದೇ ಒಂದು ಬಾರಿ ರಾಜಿಯಾಗಿತ್ತೆಂದು ಅವನು ತಿಳಿಸಿದ್ದಾನೆಂದು ಅರ್ಜಿದಾರನು ಒಪ್ಪಿಕೊಂಡಿರುವುದನ್ನು ಸಹ ಗಮನಕ್ಕೆ ತೆಗೆದುಕೊಳ್ಳಲಾಗಿದೆ. **ಎದುರುದಾರರು 3 ವರ್ಷಗಳಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದರೆಂಬುದನ್ನು ಒಪ್ಪಿಕೊಂಡಿದ್ದಾರೆ**. ಅಲ್ಲದೆ, ಅವನು ತನ್ನ ಮಗಳ ವೆಚ್ಚಕ್ಕೆ 1000/- ರೂ. ಮೊತ್ತವನ್ನು ಕೊಡುತ್ತಿದ್ದನು. ಇದರ ಸಂಬಂಧ ಯಾವುದೇ ದಸ್ತಾವೇಜೀಯ ಸಾಕ್ಷ್ಯವನ್ನು ಅವನು ಹಾಜರುಪಡಿಸಿರುವುದಿಲ್ಲ. ಅರ್ಜಿದಾರನು ಮನೆಗೆ ಸಾಕಷ್ಟು ಆಹಾರ ಧಾನ್ಯಗಳನ್ನು ತರುತ್ತಿರಲಿಲ್ಲವೆಂದು ಮತ್ತು ಎದುರುದಾರನಿಗೆ ಊಟವನ್ನು ಒದಗಿಸುತ್ತಿರಲಿಲ್ಲವೆಂದು ಈ ಕಾರಣಕ್ಕಾಗಿ ಆತನ ಪತ್ನಿ/1ನೇ ಎದುರುದಾರಳು ತನ್ನ ತವರು ಮನೆಗೆ ಹೋಗಿದ್ದಳೆಂದು, ಊಟದ ಕಾರಣಕ್ಕಾಗಿ ಕೆಲವು ದಿನಗಳ ಕಾಲ ಅಲ್ಲಿ ಉಳಿದಿದ್ದು ಅವರು ಗಂಡನ ಮನೆಗೆ ಹಿಂದಿರುಗಿದಳೆಂಬುದನ್ನು ದಾಖಲೆಯುಲ್ಲಿರುವ ಸಾಕ್ಷ್ಯವು ಸ್ಪಷ್ಟವಾಗಿ ರುಜುವಾತುಪಡಿಸಿದೆ. ಅರ್ಜಿದಾರನು ಉದ್ದೇಶಪೂರ್ವಕವಾಗಿ ಮತ್ತು ಸಂಪೂರ್ಣವಾಗಿ ಎದುರುದಾರರನ್ನು ನಿರ್ಲಕ್ಷಿಸಿದ್ದರು. ಅವನಿಗೆ ನಿಜವಾದ ಪ್ರೀತಿ ವಾತ್ಸಲ್ಯವಿದ್ದಿದ್ದರೆ ಅವನು ಜೀವನ ಸಾಗಿಸಲು ತನ್ನ ವಿವಾಹವಾದ ಮನೆಗೆ ಕರೆತರುತ್ತಿದ್ದ. ಈಗಲೂ ಕೂಡ ಅವನು ಎದುರುದಾರರನ್ನು ಹಿಂದಕ್ಕೆ ಕರೆತಂದಿರಲಿಲ್ಲ. ಆದ್ದರಿಂದ 1ನೇ ಎದುರುದಾರಳು ತನ್ನ ಮಗುವಿನೊಂದಿಗೆ ತನ್ನ ತವರು ಮನೆಯಲ್ಲಿ ಉಳಿದುಕೊಂಡಿದ್ದುದನ್ನು ಸಮರ್ಥಿಸಬಹುದಾಗಿದೆಯೆಂಬ ನಿರ್ಣಯಕ್ಕೆ ಬರಲಾಗಿದೆ. ಆದುದರಿಂದ ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಗಿರೀಶ್ ಎ. ಯಾದ್ವಾಡ್‌ರವರು ಎತ್ತಿರುವ ವಾದಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 125(4)ನೇ ಪ್ರಕರಣದ ಉಪಬಂಧಗಳನ್ನು ಅನ್ವಯಿಸುತ್ತವೆ ಎಂಬುದನ್ನು ಒಪ್ಪಿಕೊಳ್ಳಲು ಆಗುವುದಿಲ್ಲ. ಪ್ರಾ.ಸಾ.1ರ ಅರ್ಜಿ ಮತ್ತು ಸಾಕ್ಷ್ಯ ಅರ್ಜಿದಾರನು 3 ವರ್ಷಗಳಿಗಿಂತ ಹೆಚ್ಚು ಕಾಲ ಎದುರುದಾರರನ್ನು ಬಿಟ್ಟಿದ್ದರು ಮತ್ತು ಉದ್ದೇಶಪೂರ್ವಕವಾಗಿ ಸಂಪೂರ್ಣವಾಗಿ ಅವರನ್ನು ನಿರ್ಲಕ್ಷಿಸಿದ್ದರು ಎಂದು

ಕೌಟುಂಬಿಕ ನ್ಯಾಯಾಲಯವು ದಾಖಲಿಸಿದ ನಿರ್ಣಯಗಳೆರಡರಲ್ಲು ಸಾಕಷ್ಟು ಕಾರಣಗಳಿವೆ. ಕೌಟುಂಬಿಕ ನ್ಯಾಯಾಲಯಗಳ ಅಧಿನಿಯಮ, 1984ರ 19(4)ನೇ ಪ್ರಕರಣದ ಮೇರೆಗೆ ಪುನರೀಕ್ಷಣಾ ಅಧಿಕಾರವ್ಯಾಪ್ತಿಯನ್ನು ಚಲಾಯಿಸಿ ಈ ನ್ಯಾಯಾಲಯವು ಸಂಗತಿಯ ಅಂಥ ನಿರ್ಣಯದಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಾಗುವುದಿಲ್ಲ.

12. ಜೀವನಾಂಶದ ಪ್ರಮಾಣಕ್ಕೆ ಬಂದರೆ, ಕೌಟುಂಬಿಕ ನ್ಯಾಯಾಲಯವು, ಅರ್ಜಿದಾರನು ಅವರೇ ಒಪ್ಪಿಕೊಂಡಿರುವ ಹಾಗೆ ರಬ್ಬರ್ ಸ್ಟಾಂಪ್ ವ್ಯವಹಾರವನ್ನು ನಡೆಸುತ್ತಿದ್ದರೆಂಬ ನಿರ್ಣಯವನ್ನು ನಿರ್ದಿಷ್ಟವಾಗಿ ದಾಖಲಿಸಿದೆ. ಅರ್ಜಿದಾರರೇ ಒಪ್ಪಿಕೊಂಡಿರುವಂತೆ, ಅವರು ಬಾಗಲಕೋಟೆಯಲ್ಲಿ ರಬ್ಬರ್ ಸ್ಟಾಂಪ್ ವ್ಯವಹಾರವನ್ನು ನಡೆಸುತ್ತಿದ್ದು ಒಳ್ಳೆಯ ಆದಾಯವನ್ನು ಗಳಿಸುತ್ತಿದ್ದರು. ಅವನು ತನ್ನ ಪತ್ನಿ ಮತ್ತು ಮಗಳಿಗೆ ಜೀವನಾಂಶವನ್ನು ನೀಡುವುದು ಸಹ ಅವನ ಬದ್ಧ ಕರ್ತವ್ಯ ಮತ್ತು ಹೊಣೆಗಾರಿಕೆಯಾಗಿದೆ. 3 ವರ್ಷಗಳಿಂದ ಅವನು ತನ್ನ ಪತ್ನಿಗೆ ಮತ್ತು ಮಗಳಿಗೆ ಒಂದೇ ಒಂದು ನಯಾಪೈಸೆಯನ್ನು ಸಹ ನೀಡಿಲ್ಲ. ಎದುರುದಾರರ ಅಗತ್ಯತೆಗಳು ಮತ್ತು ಅರ್ಜಿದಾರನ ಆರ್ಥಿಕ ಸ್ಥಿತಿಗತಿಯನ್ನು ಪರಿಗಣಿಸಿ ಮತ್ತು ದಾಖಲೆಯಲ್ಲಿರುವ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಪರಿಗಣಿಸಿ, ಕೌಟುಂಬಿಕ ನ್ಯಾಯಾಲಯವು, ಪತ್ನಿ/1ನೇಎದುರುದಾರಳಿಗೆ 2500/– ರೂ.ಗಳ ಮಾಸಿಕ ಜೀವನಾಂಶವನ್ನು ಮತ್ತು ಅವನ ಮಗಳು/2ನೇ ಎದುರುದಾರಳಿಗೆ ಅವಳು ಪ್ರಾಪ್ತ ವಯಸ್ಕಳಾಗುವವರೆಗೆ 1000/– ರೂ.ಗಳನ್ನು ಮಂಜೂರು ಮಾಡಿದೆ ಮತ್ತು ಇದು ಕಾನೂನಿಗನುಸಾರವಾಗಿದೆ.

13. ಈ ಹಂತದಲ್ಲಿ, ಭಾರತ ದಂಡ ಸಂಹಿತೆಯ 125ನೇ ಪ್ರಕರಣದ ಉಪಬಂಧಗಳು, ಸಾಕಷ್ಟು ವರಮಾನವನ್ನು ಹೊಂದಿರುವ ಯಾರೇ ವ್ಯಕ್ತಿಯು ತನ್ನ ಹೆಂಡತಿಯ ಜೀವನ ನಿರ್ವಹಣೆ ಮಾಡುವುದನ್ನು ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ, ಅವಳನ್ನು ಅಥವಾ ವಿವಾಹವಾಗಿರಲಿ ಅಥವಾ ಆಗದಿರಲಿ ಅವನ ಔರಸ ಅಥವಾ ಅನೌರಸ ಮಗುವನ್ನು ನಿರ್ವಹಿಸಲು ಆಗದಿದ್ದರೆ ಅದನ್ನು ನಿರ್ವಹಿಸಲು ಆಗದಿದ್ದರೆ, ಅವನು ಜೀವನಾಂಶವನ್ನು ಸಂದಾಯ ಮಾಡಬೇಕು. ಪ್ರಸ್ತುತ ಪ್ರಕರಣದಲ್ಲಿ,

ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಆಧರಿಸಿ, ಕೌಟುಂಬಿಕ ನ್ಯಾಯಾಲಯವು, ಅರ್ಜಿದಾರನು ಸಾಕ್ಷಷ್ಟು ಸಂಪಾದನೆಯನ್ನು ಹೊಂದಿದ್ದು ಎದುರುದಾರರನ್ನು ಉದ್ದೇಶಪೂರ್ವಕವಾಗಿ ಮತ್ತು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾನೆ ಮತ್ತು ಜೀವನಾಂಶವನ್ನು ಸಂದಾಯ ಮಾಡಲು ನಿರಾಕರಿಸಿದ್ದಾನೆಂಬ ನಿರ್ಣಯವನ್ನು ದಾಖಲಿಸಿದೆ. ಆದ್ದರಿಂದ ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಉಪಬಂಧಗಳನ್ನು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸಲಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಉಪಬಂಧಗಳನ್ನು ಪರಿಗಣಿಸಿ ***ಭುವನ್ ಮೋಹನ್ ಸಿಂಗ್ –ವಿರುದ್ಧ– ಮೀನ್***[1] ಪ್ರಕರಣದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> *"ಭಾರತ ದಂಡ ಸಂಹಿತೆಯ ("ಸಂಕ್ಷಿಪ್ತತೆಗಾಗಿ ಸಂಹಿತೆ") 125ನೇ ಪ್ರಕರಣವು, ಉಪಬಂಧದಲ್ಲಿ ನೀಡಲಾದ ಕಾರಣಗಳಿಗಾಗಿ ತನ್ನ ಗಂಡನ ಮನೆಯನ್ನು ತ್ಯಜಿಸಿರುವ ಮಹಿಳೆಯ ಕಡುಕಷ್ಟ, ಯಾತನೆಯನ್ನು ಹೆಚ್ಚಿಸುತ್ತದೆಂಬುದನ್ನು ಪುನರುಚ್ಚರಿಸುತ್ತದೆ. ಹಾಗೆಯೇ ನ್ಯಾಯಾಲಯವು ಕೆಲವು ಸೂಕ್ತ ಸಿದ್ಧತೆಗಳನ್ನು ಮಾಡಿಕೊಳ್ಳಬಹುದು ಮತ್ತು ಅವಳು ತಾನಾಗಿಯೇ ಮತ್ತು ಮಕ್ಕಳು ಅವಳ ಜೊತೆಗಿದ್ದರೆ ಅವಳೇ ಅದನ್ನು ಪಡೆದುಕೊಳ್ಳಬಹುದು. ಜೀವನೋಪಾಯ ಎಂಬ ಪರಿಕಲ್ಪನೆಯು ಅಗತ್ಯವಾಗಿ ಪ್ರಾಣಿಯಂತೆ ಜೀವನ ಸಾಗಿಸುವುದು ಎಂಬ ಅರ್ಥವನ್ನು ಕೊಡುವುದಿಲ್ಲ. ಎಲ್ಲಿಯೋ ಅವಳ ಮೂಲ ಜೀವನಾಂಶಕ್ಕೆ ಯಾವುದೋ ಬಗೆಯಲ್ಲಿ ಮತ್ತು ರೀತಿಯಲ್ಲಿ ಅನಾಮಧೇಯದಂತೆ, ಅಲೆಮಾರಿಗಳಂತೆ ಬದುಕುವುದಲ್ಲ. ಅವಳು ತನ್ನ ಗಂಡನ ಮನೆಯಲ್ಲಿ ವಾಸಿಸುವಂತೆಯೇ ಅದೇ ರೀತಿಯಲ್ಲಿ ಜೀವನ ನಡೆಸಲು ಕಾನೂನಿನಲ್ಲಿ ಹಕ್ಕುಳ್ಳವಳಾಗಿರುತ್ತಾಳೆ. ಪತ್ನಿಯ ವಿಷಯದಲ್ಲಿ ಎಲ್ಲಿ ಅವಳಿಗೆ ಸ್ಥಾನಮಾನ ಮತ್ತು ಅಂತಸ್ತು ಲಭಿಸುತ್ತವೆಯೋ ಅಲ್ಲಿ ಮತ್ತು ಎಲ್ಲಿ ಅವಳಿಗೆ ಪತಿಯ ಹೊಣೆಗಾರಿಕೆಗಳು*

1. ಎಐಆರ್ 2014 ಎಸ್‌ಸಿ 2875

*ಇರುತ್ತವೋ ಅಲ್ಲಿ ಪ್ರಧಾನವಾಗಿ ಪರಿಣಮಿಸುತ್ತದೆ. ಈ ಸ್ವರೂಪದ ವ್ಯವಹರಣೆಯಲ್ಲಿ ಪತಿಯು, ಗೌರವವಾಗಿ ಬದುಕುವ ಅವಳ ಅವಕಾಶವನ್ನು ಕಿತ್ತುಕೊಳ್ಳುವುದರಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ವಿವಾಹದ ಸಮಯದಲ್ಲಿ ಮಾಡಿದ ವಿಧಿವತ್ತಾದ ವಾಗ್ದಾನ ಮಾಡುವುದಕ್ಕೆ ಸಂಬಂಧಿಸಿದಂತೆ ಹೆಂಡತಿಯನ್ನು ನಿರ್ಗತಿಕಳಾಗದಂತೆ, ದರಿದ್ರಳಾಗದಂತೆ ನೋಡಿಕೊಳ್ಳುವುದು ಗಂಡನ ಹೊಣೆಗಾರಿಕೆ ಯಾಗಿರುತ್ತದೆ. ಪರಿಸ್ಥಿತಿಯು ಅವಿವೇಕದಿಂದ ಅವಳ ಹಣೆಬರಹವನ್ನು ಹಳಿದುಕೊಳ್ಳುವ ಮತ್ತು ಬದುಕೆಂದರೆ ಮಣ್ಣು ಪಾಲಾಗುವ ಪರಿಸ್ಥಿತಿಯನ್ನು ನಿರ್ಮಾಣ ಮಾಡುವಂಥದ್ದಲ್ಲ ಎಂಬುದು ಜೀವನದ ಆಲೋಚನೆಯಾಗಿರುತ್ತದೆ. ಇದು ಸಂಪೂರ್ಣವಾಗಿ ಅನುಮತೀಯವಾಗಿರುವುದಿಲ್ಲ. ವಾಸ್ತವವಾಗಿ ಅವನು ಸದೃಢ ದೇಹಧಾರಿಯಾಗಿದ್ದರೆ ದೈಹಿಕ ಕೆಲಸದಿಂದ ಹಣವನ್ನು ಸಂಪಾದಿಸಬೇಕಾಗುತ್ತದೆಯಾದರೂ ಸಹ ಆರ್ಥಿಕ ಬೆಂಬಲವನ್ನು ನೀಡುವುದು ಪರಮ ಪವಿತ್ರ ಕರ್ತವ್ಯವಾಗಿರುತ್ತದೆ. ಯಾವುದೇ ಕಾನೂನು ಬದ್ಧ ಅನುಮತೀಯವಾದ ಆಧಾರಗಳಿಂದ ಪತಿಯಿಂದ ಜೀವನಾಂಶವನ್ನು ಪಡೆದುಕೊಳ್ಳಲು ಪತ್ನಿಯು ಹಕ್ಕುಳ್ಳವಳಾಗಿರುತ್ತಾಳೆಂದು ನ್ಯಾಯಾಲಯದಿಂದ ಆದೇಶವಾಗಿರುವುದರ ಹೊರತು ತಪ್ಪಿಸಿಕೊಳ್ಳಲು ಯಾವುದೇ ಮಾರ್ಗ ಇರುವುದಿಲ್ಲ.”*

14. ಮೇಲೆ ಹೇಳಲಾದ ಕಾರಣಗಳನ್ನು ಮತ್ತು ಮೇಲೆ ನಿರೂಪಿಸಲಾದ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಕಾನೂನನ್ನು ದೃಷ್ಟಿಯಲ್ಲಿಟ್ಟುಕೊಂಡು ಕೌಟುಂಬಿಕ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವು ಕಾನೂನಿಗನುಸಾರವಾಗಿರುತ್ತದೆ. ಪುನರೀಕ್ಷಣಾ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಹಸ್ತಕ್ಷೇಪ ಮಾಡಲು ಉತ್ತಮ ಆಧಾರಗಳು ನನಗೆ ಕಂಡು ಬಂದಿರುವುದಿಲ್ಲ. ತದನುಸಾರವಾಗಿ ಪುನರ್ ಪರಿಶೀಲನಾ ಅರ್ಜಿಯನ್ನು ವಜಾಗೊಳಿಸಲಾಗಿದೆ.

---